# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1238(1387)** |
| ಸದಸ್ಯರ ಹೆಸರು | : | **ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| ಉತ್ತರಿಸುವ ದಿನಾಂಕ | : | **22.08.2025** |
| ಉತ್ತರಿಸುವ ಸಚಿವರು | : | **ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ 2024-25 ಮತ್ತು 2025-26ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು; ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳು ನಡೆದಿವೆ; ಮತ್ತು ಎಷ್ಟು ಕಾಮಗಾರಿ ಪ್ರಗತಿಯಲ್ಲಿವೆ: (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ</th><th>ವರ್ಷ</th><th>ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ)</th></tr>
<tr><td>1</td><td>2024-25</td><td>3000.00</td></tr>
<tr><td>2</td><td>2025-26</td><td>ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ</td></tr>
</table>
2024-25ನೇ ಸಾಲಿಗೆ ಮೈಕ್ರೋ/ ಮ್ಯಾಕ್ರೋ/ ಅಧ್ಯಕ್ಷರ ವಿವೇಚನ ನಿಧಿ / ಸರ್ಕಾರದ ವಿವೇಚನ ನಿಧಿ/ ಮಾನ್ಯ ಮುಖ್ಯಮಂತ್ರಿಗಳ ವಿವೇಚನ ನಿಧಿ / ಪ್ರಾದೇಶಿಕ ನಿಧಿಯಡಿ ಮಂಜೂರಾತಿ ನೀಡಿದ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳು ಈ ಮುಂದಿನಂತಿವೆ.
<table>
<tr><th>Type</th><th>No. of Works</th><th>Completed</th><th>Under Progress</th><th>Not Started</th></tr>
<tr><td>MICRO</td><td>3469</td><td>516</td><td>2153</td><td>800</td></tr>
<tr><td>MACRO</td><td>1223</td><td>163</td><td>678</td><td>382</td></tr>
<tr><td>CDQ</td><td>77</td><td>18</td><td>49</td><td>10</td></tr>
<tr><td>GDQ</td><td>324</td><td>70</td><td>201</td><td>53</td></tr>
<tr><td>CMDQ</td><td>116</td><td>26</td><td>46</td><td>44</td></tr>
<tr><td>Regional Fund</td><td>81</td><td>23</td><td>34</td><td>24</td></tr>
<tr><td>Interest Fund</td><td>5</td><td>1</td><td>1</td><td>3</td></tr>
<tr><td>Budget Para & SS</td><td>160</td><td>0</td><td>14</td><td>146</td></tr>
<tr><td>Universities</td><td>97</td><td>0</td><td>0</td><td>97</td></tr>
<tr><td>TOTAL</td><td>5552</td><td>817</td><td>3176</td><td>1559</td></tr>
</table>
2025-26ನೇ ಸಾಲಿಗೆ ಕ್ರಿಯಾ ಯೋಜನೆ ರೂಪಿಸಲು ಘನತೆವೆತ್ತ ರಾಜ್ಯಪಾಲರ ಅನುಮೋದನೆ ಪಡೆದು ಆದೇಶ ಹೊರಡಿಸಲಾಗಿದೆ. ಮಂಡಳಿಯಲ್ಲಿ ಪ್ರಾರಂಭಿಕ ಶಿಲ್ಕು ರೂ.3090.24 ಕೋಟಿಗಳು ಇರುವುದರಿಂದ ಪ್ರಸ್ತುತ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.<br>
ಜಿಲ್ಲಾವಾರು / ಯೋಜನೆವಾರು ಪೂರ್ಣಗೊಂಡ ಕಾಮಗಾರಿಗಳು ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
</table>

**(ಆ)** ಕಳೆದ ಎರಡು ವರ್ಷಗಳಲ್ಲಿ ಕೆ.ಕೆ.ಆರ್.ಡಿ ಬಿ. ಗೆ ಸರ್ಕಾರ ನೀಡಿರುವ ಹಣವನ್ನು ಯಾವ ಯಾವ ಜಿಲ್ಲೆಗಳಿಗೆ ಎಷ್ಟು ವಿನಿಯೋಗಿಸಲಾಗಿದೆ ಮತ್ತು ಯಾವ ಕಾಮಗಾರಿಗಳಿಗೆ ಈ ಹಣ ಬಳಕೆಯಾಗಿದೆ; (ಜಿಲ್ಲಾವಾರು, ಕಾಮಗಾರಿವಾರು ಸಂಪೂರ್ಣ ಮಾಹಿತಿ ನೀಡುವುದು)

ಕಳೆದ ಎರಡು ವರ್ಷಗಳಲ್ಲಿ ಸರ್ಕಾರದಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ನೀಡಿರುವ ಅನುದಾನದಲ್ಲಿ ಜಿಲ್ಲೆಗಳಿಗೆ ರೂ. 4682.88 ಕೋಟಿಗಳ ಅನುದಾನಕ್ಕೆ ಮಂಜೂರಾತಿ ನೀಡಿದ್ದು, ಈ ಪೈಕಿ ರೂ.1605.13 ಕೋಟಿಗಳ ಅನುದಾನ ವಿನಿಯೋಗಿಸಲಾಗಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿನ ಜನರಿಗೆ ಅನುಕೂಲವಾಗುವಂತಹ ಶಿಕ್ಷಣ, ಆರೋಗ್ಯ, ಕೃಷಿ, ತೋಟಗಾರಿಕೆ, ರಸ್ತೆ&ಸಂಪರ್ಕ, ಸಮುದಾಯ ಭವನ, ಪ್ರವಾಸೋದ್ಯಮ, ಸಾಂಸ್ಕೃತಿಕ ವಲಯದ ಕಾಮಗಾರಿಗಳು, ಅರಣ್ಯೀಕರಣ, ಚರಂಡಿ, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ, ಹಾಸ್ಟೇಲ್‌ಗಳ ಮೂಲಸೌಕರ್ಯ, ಕ್ರೀಡಾ ವಲಯಕ್ಕೆ ಸಂಬಂಧಿಸಿದ ಕಾಮಗಾರಿಗಳು, ಅಂತರ್ಜಲ ಸಂರಕ್ಷಣೆಗೆ ಸಂಬಂಧಿಸಿದ ಕಾಮಗಾರಿಗಳು, ನೀರಾವರಿಗೆ ಸಂಬಂಧಿಸಿದ ಕಾಮಗಾರಿಗಳು, ಕುಡಿಯುವ ನೀರು ಸರಬರಾಜು ಕಾಮಗಾರಿಗಳು ಜಮೀನು ಖರೀದಿ, ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನವನ್ನು ಬಳಕೆ ಮಾಡಲಾಗಿದೆ.

ಜಿಲ್ಲಾವಾರು, ಕಾಮಗಾರಿವಾರು ವಿವರಗಳನ್ನು ಅನುಬಂಧ-1ರಲ್ಲಿಯೇ ನೀಡಲಾಗಿದೆ.

**(ಇ)** ಕಳೆದ ಎರಡು ವರ್ಷಗಳಲ್ಲಿ ಕೆ.ಕೆ.ಆರ್.ಡಿ.ಬಿ. ಅನುದಾನ ಬಳಕೆಯಾಗಿರುವುದು ಎಷ್ಟು; ಉಳಿಕೆ ಅನುದಾನ ಎಷ್ಟು; ಅಥವಾ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಬಿಡುಗಡೆ ಮಾಡಬೇಕಾದ ಹಣ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

ಕಳೆದ ಎರಡು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಬಳಕೆಯಾಗಿರುವ ಅನುದಾನ ಮತ್ತು ಉಳಿಕೆಯಾಗಿರುವ ಅನುದಾನದ ವಿವರ ಈ ಕೆಳಕಂಡಿಂತಿವೆ.

(ರೂ. ಕೋಟಿಗಳಲ್ಲಿ)

| ಕ್ರ ಸಂ | ವರ್ಷ | ಆರಂಭಿಕ ಶಿಲ್ಕು | ಬಿಡುಗಡೆಯಾದ ಅನುದಾನ | ಒಟ್ಟು ಅನುದಾನ | ವೆಚ್ಚ * | ಉಳಿಕೆ |
|---|---|---|---|---|---|---|
| 1 | 2023-24 | 2113.81 | 3000.00 | 5113.81 | 2009.53 | 3104.28 |
| 2 | 2024-25 | 3117.07 | 3000.00 | 6117.07 | 3145.00 | 2972.07 |

* ಆರಂಭಿಕ ಶಿಲ್ಕು ಒಳಗೊಂಡಂತೆ ವೆಚ್ಚ ಭರಿಸಿರುವ ಕಾರಣ ಬಿಡುಗಡೆಗಿಂತ ವೆಚ್ಚ ಅಧಿಕವಾಗಿರುತ್ತದೆ.

ಉಳಿಕೆಯಾಗಿರುವ ಅನುದಾನವನ್ನು ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಬಳಕೆ ಮಾಡಲಾಗುತ್ತಿದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

**(ಈ)** ಈ ಅನುದಾನದಲ್ಲಿ ಶಿಕ್ಷಣಕ್ಕಾಗಿ ಶೇಕಡ 25% ಮೀಸಲಿಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆಯೇ; ಹಾಗಾದರೆ ಈ ಹಣದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಯಾವ ಯಾವ ಕಾರ್ಯಕ್ರಮಗಳು/ಯೋಜನೆಗಳನ್ನು ಕೈಗೊಳ್ಳಲಾಗಿದೆ;

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಅನುಮೋದಿಸಿ ಘನವೆತ್ತ ರಾಜ್ಯಪಾಲರ ಅನುಮೋದನೆಯೊಂದಿಗೆ ಸರ್ಕಾರದ ಆದೇಶದೊಂದಿಗೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಲು 2023-24ನೇ ವರ್ಷವನ್ನು "Year of Education" ಎಂದು ಘೋಷಣೆ ಮಾಡಲಾಗಿದೆ. ಅದರಂತೆ, ಮಂಡಳಿಯ 2023-24ನೇ ಸಾಲಿನ ಮೈಕ್ರೋ ಮತ್ತು ಮ್ಯಾಕ್ರೋ ಯೋಜನೆಗೆ ನಿಗದಿಪಡಿಸಿದ ಒಟ್ಟು ಅನುದಾನದಲ್ಲಿ ಶೇ.25% ರಷ್ಟು ಅಂದರೆ ರೂ.652.50 ಕೋಟಿಗಳು, 2024-25ನೇ ಸಾಲಿಗೆ ಮೈಕ್ರೋ ಯೋಜನೆಗೆ ನಿಗದಿಪಡಿಸಿದ ಒಟ್ಟು ಅನುದಾನದಲ್ಲಿ ಶೇ 25% ರಷ್ಟು ಅಂದರೆ ರೂ. 524.06 ಕೋಟಿಗಳು ಅನುದಾನವನ್ನು ಮಂಡಳಿಯ ನಿರ್ಧಾರದಂತೆ ಅಕ್ಷರ ಆವಿಷ್ಕಾರ ಯೋಜನೆಯ ರೂಪದಲ್ಲಿ ಅನುಷ್ಠಾನ ಮಾಡಲು ತೀರ್ಮಾನಿಸಿ ನಿಗದಿಪಡಿಸಿರುವ ಅನುದಾನಕ್ಕೆ ಕ್ರಿಯಾಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.



ile No. PDS-HKD/56/2025-DADB-PLANNING DEPARTMENT (Computer No. 1875364)

| | | |
|---|---|---|
| | | ಅಕ್ಷರ ಆವಿಷ್ಕಾರ ಯೋಜನೆಯಡಿಯಲ್ಲಿ ಶಾಲಾ ಕೊಠಡಿಗಳ ದುರಸ್ತಿ, ಹೆಚ್ಚುವರಿ ಕೋಣೆಗಳ ನಿರ್ಮಾಣ ವಿವಿಧ ಪಿಠೋಪಕರಣಗಳು, ಸ್ಮಾರ್ಟ್ ಕ್ಲಾಸ್ ನಿರ್ಮಾಣ, ವಿದ್ಯುತ್ತೀಕರಣ, ಶೌಚಾಲಯ ನಿರ್ಮಾಣ. ಗ್ರಂಥಾಲಯ ನಿರ್ಮಾಣ, ತಡೆಗೋಡೆ ನಿರ್ಮಾಣ ECCE Bi-lingual NSQF ನಲಿಕಲಿ ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |
| (ಊ) | ಈ ಭಾಗದ ಎಸ್.ಎಸ್.ಎಲ್.ಸಿ ಫಲಿತಾಂಶ ಅತ್ಯಂತ ಕೆಳಮಟ್ಟದಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ; ಈ ಫಲಿತಾಂಶ ಹೆಚ್ಚಳಕ್ಕಾಗಿ ಕೆ.ಕೆ.ಆರ್.ಡಿ.ಬಿ. ನಿಧಿಯಿಂದ ಕೈಗೊಳ್ಳಲಾದ ಯೋಜನೆಗಳು ಯಾವುವು; ಮತ್ತು ಇದಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಮತ್ತು ಖರ್ಚು ಮಾಡಿರುವ ಹಣ ಎಷ್ಟು? | ಹೌದು.<br><br>ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 8ನೇ 9ನೇ ಮತ್ತು 10ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಮಟ್ಟ ಉತ್ತಮ ಪಡೆಸಲು ಹಾಗೂ ಮುಂಬರುವ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣರಾಗಲು ಕಲಿಕಾಸರೆ ಅಭ್ಯಾಸ ಪುಸ್ತಕಗಳನ್ನು ಮುದ್ರಣ ಮಾಡಿ ವಿತರಣೆ ಮಾಡಲು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಅನುದಾನ ಒದಗಿಸಲಾಗುತ್ತಿದೆ.<br><br>ಕಳೆದ ಎರಡು ವರ್ಷಗಳಲ್ಲಿ ಮಂಡಳಿಯಿಂದ ಸದರಿ ಯೋಜನೆಗೆ ರೂ.8.59 ಕೋಟಿಗಳ ಅನುದಾನಕ್ಕೆ ಮಂಜೂರಾತಿ ನೀಡಿದ್ದು, ಈ ಪೈಕಿ ರೂ.5.42 ಕೋಟಿಗಳ ಅನುದಾನ ವೆಚ್ಚವಾಗಿರುತ್ತದೆ. |

**ಸಂಖ್ಯೆ: ಪಿಡಿಎಸ್ 56 ಹೆಚ್‌ಕೆಡಿ 2025**

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.